ಶ್ರೀ ಪಿ. ಬಸವರಾಜ್ : ನ್ಯಾಯಾಲಯದ ಇಂಟರೀಯಮ್ ಆರ್ಡರ್ ಪ್ರಕಾರ ಚುನಾವಣೆ ನಡೆದಿದೆ. ಅದನ್ನು ತಡೆಗಟ್ಟುವುದಕ್ಕೆ ಸರ್ಕಾರ ಏನು ಸಿದ್ಧತೆ ಮಾಡಿದೆ ಅಥವಾ ಏನು ಮಾಡುತ್ತದೆ ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗಾಗಲೇ ಹೇಳಿದ ಪ್ರಕಾರ, ನ್ಯಾಯಾಲಯದ ತೀರ್ಪನ್ನು ಪರಿಶೀಲನೆ ಮಾಡುತ್ತೇವೆ, ಪರಿಶೀಲನೆ ಮಾಡಿದ ಮೇಲೆ ಸರ್ಕಾರ ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತದೆ.

ಅಪೇಕ್ಷಣಾ ರಹಿತ ಪತ್ರ ನೀಡಿಕೆ

489 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಿಂಬೆಳ್ಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಶವಂತಪುರ ಹೋಬಳಿ, ಮೊಳಗಾಲ ಗ್ರಾಮದ ಸರ್ವೆ ನಂ. 46ರ 6ಎ-26ಗುಂಟೆ ಜಮೀನನ್ನು ಹರಿಜನ, ಗಿರಿಜನ ಮತ್ತು ಆರ್ಥಿಕ ಹಿಂದುಳಿದ ಮನೆ ನಿವೇಶನ ರಹಿತರ ಸಂಘದ ಪರವಾಗಿ ಗೃಹ ಮಂಡಳಿಗೆ ಬಡಾವಣೆ ಕಾಮಗಾರಿ ಕೈಗೊಳ್ಳಲು ತಕರಾರು ರಹಿತ ಪತ್ರ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಯಾವ ದಿನಾಂಕದಂದು ತಕರಾರು ಪತ್ರ ನೀಡಿದೆ.*

ಆ) *ಬೆಂಗಳೂರರು ಅಭಿವೃದ್ಧಿ ಪ್ರಾಧಿಕಾರವು ತನ್ನ : ಸಭೆಯ ಠರಾವು ಸಂಖ್ಯೆ: 102 :93,19.10.1992 ರಂದು ಉದ್ಯಾನ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗವನ್ನು ಬದಲಾಯಿಸುವಂತೆ ಶಿಫಾರಸ್ಸು ಮಾಡಿದ್ದನ್ನು ಲಕ್ಷ್ಮಣರಾವ್ ವರದಿಯ ಆಧಾರದ ಮೇಲೆ 15.6.1993ರ ಸಭೆಯಲ್ಲಿ ಹಿಂತೆಗೆದುಕೊಳ್ಳಲು ತೀರ್ಮಾನಿಸಿದ್ದು ಸರಿಯೇ, ಹಾಗೂ ಇದರ ಔಚಿತ್ಯವೇನು, ಈ ವರದಿಗೂ ಸದರಿ ಸ್ವತ್ತಿಗೂ ಏನು ಸಂಬಂಧವಿದೆ.*

ಇ) *ಶ್ರೀ ಲಕ್ಷ್ಮಣರಾವ್ ಸಮಿತಿ ವರದಿ ಸರ್ಕಾರ ಜಾರಿಗೊಳಿಸಿದ್ದು ಯಾವ ದಿನಾಂಕದಿಂದ*

ಈ) *ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಡಾಲರ್ ಯೋಜನೆಗೆ ಬದಲಿ ನಿವೇಶನ ನೀಡಲು ಬಿಳಿಕೇನಹಳ್ಳಿ ಗ್ರಾಮದ ಸರ್ವೆ ನಂ. 167ರ 56ಎ 34 ಗುಂಟೆ ಜಮೀನಿಗೆ ಉದ್ಯಾನ ವಲಯದಿಂದ ವಸತಿ ವಲಯಕ್ಕೆ ಶಿಫಾರಸ್ಸು ಮಾಡಿ ಜೂನ್ 94 ರಲ್ಲಿ ಸರ್ಕಾರಿ ಆದೇಶ ಪಡೆದಿದ್ದು ಹರಿಜನ, ಗಿರಿಜನರಿಗೆ ಮೊಳಗಾಲ ಗ್ರಾಮದ ಕೆರೆ ಸರ್ವೆ ನಂ. 46ರ ಕೇವಲ 6 ಎಕರೆ - 26 ಗುಂಟೆ ಜಮಿನಿಗೆ ಉದ್ಯಾನ ವಲಯದಿಂದ ವಸತಿವಲಯಕ್ಕೆ ಭೂ ಪರಿವರ್ತನೆಗೆ ಶಿಫಾರಸ್ಸು ಮಾಡದಿರುವುದು ಸರಿಯೇ?*

ಉ) *ಪರಿವರ್ತನೆಯ ಆದೇಶವನ್ನು ಯಾವಾಗ ನೀಡಲಾಗುವುದು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಕರ್ನಾಟಕ ಗೃಹ ಮಂಡಳಿಗೆ ಬಡಾವಣೆ ಕಾಮಗಾರಿ ಕೈಗೊಳ್ಳಲು ತಕರಾರು ರಹಿತ ಪತ್ರವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನೀಡಿರುವುದಿಲ್ಲ. ಆದರೆ ಸದರಿ ಜಮೀನನ್ನು ಸಂಘಕ್ಕೆ ಹಸ್ತಾಂತರಿಸಿರುವುದಕ್ಕೆ ಅಭ್ಯಂತರವಿಲ್ಲವೆಂದು ಬೆಂಗಳೂರು ಜಿಲ್ಲಾಧಿಕಾರಿಗಳಿಗೆ ದಿನಾಂಕ 1.12.93ರಂದು ತಿಳಿಸಲಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ದಿನಾಂಕ 19.10.92ರಂದು ನಡೆದ ಸಭೆಯ ವಿಷಯ ಸಂಖ್ಯೆ : 326 : 92ರಲ್ಲಿ ಬೆಂಗಳೂರು ಉತ್ತರ ತಾಲ್ಲೂಕ್ ಯಶವಂತಪುರ ಹೋಬಳಿ ಮಳಗಾಲ ಗ್ರಾಮದ ಸರ್ವೆ ನಂ. 46ರ 6ಎ-26 ಗುಂಟೆ ಜಮೀನಿನಲ್ಲಿ

ನಿವೇಶನಗಳನ್ನು ರಚಿಸಿ ಹರಿಜನ, ಗಿರಿಜನ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಹಂಚುವುದಕ್ಕಾಗಿ ಕರ್ನಾಟಕ ಗೃಹ ಮಂಡಳಿಯ ಪರವಾಗಿ ಉದ್ಯಾನವನ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ವಿಶೇಷ ಪ್ರಕರಣವೆಂದು ಪರಿಗಣಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು.

ತದನಂತರ ದಿನಾಂಕ 23.4.1993ರಂದು ಬಿಡಿಎ ಅಧ್ಯಕ್ಷರು ಮತ್ತು ಆಯುಕ್ತರು ಇತರ ಅಧಿಕಾರಿಗಳೊಂದಿಗೆ ಸ್ಥಳ ಪರಿವೀಕ್ಷಣೆ ಮಾಡಿದರು. ಪ್ರಸ್ತಾವಿತ ಪ್ರದೇಶವು ಮಳಗಾಲ ಗ್ರಾಮಕ್ಕೆ ಸೇರಿದ ಕೆರೆಯಂಗಳವಾಗಿದ್ದು, ವ್ಯಾಪಕಾಭಿವೃದ್ಧಿ ಯೋಜನೆಯಂತೆ ಉದ್ಯಾನವನಕ್ಕಾಗಿ ಮೀಸಲಿಟ್ಟಿದೆ. ಸರ್ಕಾರದ ಇತ್ತೀಚಿನ ನೀತಿಯಂತೆ ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿ ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಬೇರೆ ಉಪಯೋಗಗಳಿಗೆ ಬದಲಾಯಿಸುವಂತಿಲ್ಲ ಹಾಗೂ ನಗರ ಸುತ್ತ ಮುತ್ತಲಿನ ಪ್ರದೇಶದಲ್ಲಿ ಬರುವ ಸಣ್ಣ ಮತ್ತು ದೊಡ್ಡ ಕೆರೆಗಳನ್ನು ಜೀರ್ಣೋದ್ಧಾರ ಮತ್ತು ಸಂರಕ್ಷಣೆ ಮಾಡಲು ಶ್ರೀ ಲಕ್ಷ್ಮಣರಾವ್ ಕಮಿಟಿಯು ಶಿಫಾರಸ್ಸು ಮಾಡಿದ್ದು ಆದರಂತೆ ಈ ಕೆರೆಯನ್ನು ಉದ್ಯಾನ ವನವನ್ನಾಗಿ ಸಂರಕ್ಷಿಸಲು ಅರಣ್ಯ ಇಲಾಖೆಯ ವಶಕ್ಕೆ ನೀಡಲಾಗಿದೆ. ಆದರಂತೆ ಈ ಹಿಂದೆ ಪ್ರಾಧಿಕಾರವು ಭೂ ಉಪಯೋಗ ಬದಲಾವಣೆಗೆ ಮಾಡಿದ್ದ ಶಿಫಾರಸ್ಸು ಹಿಂತೆಗೆದುಕೊಳ್ಳಲು ದಿನಾಂಕ 15.6.93ರ ಸಭೆಯಲ್ಲಿ ನಿರ್ಣಯಿಸಿದೆ.

ಇ) ದಿನಾಂಕ 11.2.1988 ರಿಂದ ಜಾರಿಗೊಳಿಸಲಾಗಿದೆ.

ಈ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬಿಳೇಕನಹಳ್ಳಿ ಗ್ರಾಮದ ಕೆರೆಯಂಗಳದಲ್ಲಿ ಈಗಾಗಲೇ ಲೇಔಟನ್ನು ನಿರ್ಮಿಸಿದೆ ಎಂಬ ಕಾರಣದ ಮೇಲೆ ಲಕ್ಷ್ಮಣರಾವ್ ಸಮಿತಿಯ ವರದಿಯಲ್ಲಿ ಬಿಳೇಕನಹಳ್ಳಿ ಕೆರೆಯನ್ನು ಅಭಿವೃದ್ಧಿ ಪಡಿಸಲು ಶಿಫಾರಸ್ಸು ಮಾಡಿರುವುದಿಲ್ಲ. ಬಿಳೇಕನಹಳ್ಳಿ ಗ್ರಾಮದ ಸರ್ವೆ ನಂ. 167ರ 56 ಎಕರೆ 34 ಗುಂಟೆ ಪ್ರದೇಶವು ಕೆರೆ ಅಂಗಳ ಪ್ರದೇಶದಲ್ಲಿದ್ದು ಅಲ್ಲಿ ಬಿಡಿಎಯು ಈಗಾಗಲೇ ನಿವೇಶನವನ್ನು ರಚಿಸಿ ಹಂಚಿಕೆ ಮಾಡಲಾಗಿದ್ದು ಹಂಚಿಕೆದಾರರಿಗೆ ಅನಾನುಕೂಲವಾಗದಿರಲೆಂಬ ಕಾರಣದಿಂದ ಭೂ ಉಪಯೋಗ ಬದಲಾವಣೆಗೆ ಶಿಫಾರಸ್ಸು ಮಾಡಿದ್ದನ್ನು ಒಪ್ಪಿ ಮಂಜೂರಾತಿ ನೀಡಿದೆ

ಉ) ಯಶವಂತಪುರ ಹೋಬಳಿ ಮೊಳಗಾಲ ಗ್ರಾಮದ ಸರ್ವೆ ನಂ. 46ರ 6 ಎಕರೆ 26 ಗುಂಟೆ ಪ್ರದೇಶದ ಭೂ ಉಪಯೋಗ ಬದಲಾವಣೆಯ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದ್ದು ಆದಷ್ಟು ಬೇಗನೆ ತೀರ್ಮಾನ ತೆಗೆದುಕೊಳ್ಳಲಾಗುವುದು.

ಶ್ರೀ ಆರ್. ನಾರಾಯಣ್ (ಶ್ರೀ ಟಿ.ಬಿ. ಜಯಚಂದ್ರ ಅವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಯಶವಂತಪುರ ಹೋಬಳಿ, ಮೊಳಗಾಲ ಗ್ರಾಮದ ಸರ್ವೆ ನಂ. 46ರಲ್ಲಿ 6 ಎಕರೆ 26 ಗುಂಟೆ ಜಮೀನನ್ನು, ಸರ್ಕಾರದವರೇ, 1975ರಲ್ಲಿ, ಹರಿಜನ ಗಿರಿಜನರು, ಆರ್ಥಿಕವಾಗಿ ಹಿಂದುಳಿದವರಿಗೆ ಮನೆ ಕಟ್ಟುವುದಕ್ಕೋಸ್ಕರ ಮಂಜೂರ್ಮಾಡಿದೆ. ಮತ್ತೆ ಅದಕ್ಕೆ ಕನ್‌ವರ್ಷನ್ ಫೀ ಕೂಡ ಕೊಟ್ಟಿದೆ. ಕೆರೆ ಅಂಗಳ ಎಂಬ ಕಾರಣದ ಮೇಲೆ, ಅದನ್ನು ಉದ್ಯಾನವಲಯಕ್ಕೆ ಮೀಸಲಿಟ್ಟಿದ್ದಾರೆ ಎಂಬ ಹಿನ್ನೆಲೆಯಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡ್‌ಗೆ ಹ್ಯಾಂಡ್ ಓವರ್ ಮಾಡಿದರು. ಅವರು ಲೇಔಟ್ ಮಾಡತಕ್ಕ ಸಂದರ್ಭದಲ್ಲಿ, ಇತ್ತೀಚೆಗೆ, ಲಕ್ಷಣ ರಾವ್ ಕಮಿಟಿ ವರದಿ ಪ್ರಕಾರ, ಎಲ್ಲಾ ಕೆರೆಗಳನ್ನೂ ಉದ್ಯಾನವನ ಮಾಡಬೇಕೆಂಬ ಹಿನ್ನೆಲೆಯಲ್ಲಿ, ಅದನ್ನು ಉದ್ಯಾನವಲಯದಿಂದ ವಸತಿ ವಲಯಕ್ಕೆ ಪರಿವರ್ತನೆ ಮಾಡಲು ಬಿ.ಡಿ.ಎ.ದಿಂದ ಶಿಫಾರಸ್ ಬಂದಿದೆ. ಅದು ಸರ್ಕಾರದ ಕನ್‌ಸಿಡರೇಷನ್‌ನಲ್ಲಿ ಇದೆಯೆಂದು ಹೇಳಿದ್ದೀರಿ. ಈ ಕೆರೆಯನ್ನು ಬ್ರೀಚ್ ಮಾಡಬೇಕೆಂದು 1991ರಲ್ಲಿ ಸರ್ಕಾರ, ಇದಕ್ಕೆ ಸಂಬಂಧಪಟ್ಟ ಪರ್ಮಿಷನ್ ಕೊಡಕೊಟ್ಟಿದೆ. ಇದು ಹರಿಜನರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಸೇರಿರುವುದರಿಂದ,

ಸರ್ಕಾರ ಉದ್ಯಾನವಲಯದಿಂದ, ವಸತಿ ವಲಯಕ್ಕೆ ಪರಿವರ್ತನೆ ಮಾಡುವ ಬೇಡಿಕೆ ಇರುವುದರಿಂದ, ಖಚಿತವಾಗಿ, ಇದನ್ನು ಉದ್ಯಾನವಲಯದಿಂದ ವಸತಿ ವಲಯಕ್ಕೆ ಪರ್ಮಿಷನ್ ಕೊಡುತ್ತೇವೆಂಬ ಭರವಸೆಯನ್ನು ಮಾನ್ಯಮುಖ್ಯಮಂತ್ರಿಗಳು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಯಾನ್ಯ ಅಧ್ಯಕ್ಷರೇ, ಇದು ಎರಡು ಜಮೀನಿಗೆ ಸಂಬಂಧಪಟ್ಟ ವಿಚಾರ. ಒಂದು ಮಾಳಗಾಲ ಮತ್ತೊಂದು ಬಿಳಿಕಲ್ಲು. ಬಿಳೀಕಲ್ಲಿಗೆ ಸೇರಿದ 56ಎಕರೆ, ಇದು ಲೇಔಟ್ ಕ್ಲಿಯರ್ ಮಾಡಿದ್ದಾರೆ. 1986ರಲ್ಲಿ ನಿವೇಶನವನ್ನು ಕೂಡ ಹಂಚಲಾಗಿದೆ. ಇದರಲ್ಲಿ ಸುಮಾರು ಒಟ್ಟು 600 ನಿವೇಶನ ಮಾಡಿದ್ದಾರೆ. ಈಗಾಗಲೇ ಹೈಕೋರ್ಟ್ ಸ್ಟೇ ಇರುವುದರಿಂದ, ಈ ಜಾಗವನ್ನು ಉಪಯೋಗ ಮಾಡಬಾರದೆಂದು ಹೇಳಿದ್ದಾರೆ. ಏಕೆಂದರೆ, ಅದನ್ನು ಪಾರ್ಕ್‌ಗೆ ನಿಗದಿ ಮಾಡಲಾಗಿದೆ. ಮತ್ತು ಸಿ.ಡಿ.ಪಿ. ಪ್ರಕಾರ ಇದನ್ನು ಚೇಂಜ್ ಆಫ್ ಲ್ಯಾಂಡ್ ಯೂಸ್, ಪಾರ್ಕ್ ಎಂದು, ಓಪನ್ ಸ್ಪೇಸ್ ಒಂದು ಹೇಳಿದೆ. ಇದನ್ನು ವಸತಿ ವಲಯಕ್ಕೆ ಕನ್‌ವರ್ಟ್ ಮಾಡಕೂಡದು, ಈ ವಿಚಾರದಲ್ಲಿ ಸ್ಟೇ ಇದೆ. ಆದುದರಿಂದ, ಇದು ಸದ್ಯ ಹಾಗೆಯೇ ಉಳಿದಿದೆ. ಮತ್ತು ಮಾಳಗಾಲಕ್ಕೆ ಸಂಬಂಧಪಟ್ಟಿದ್ದು ಸರ್ವೆ ನಂ. 46ರಲ್ಲಿ 6 ಎಕರೆ 26 ಗುಂಟೆ ಇದೆ. ಇದೂ ಕೂಡ ಸರ್ಕಾರದ ಸ್ವಾಧೀನದಲ್ಲಿದೆ. ಹಿಂದೆ ಇದರ ಬಗ್ಗೆ ಏನು ಪರ್ಮಿಷನ್ ಕೊಟ್ಟಿದ್ದೇವೆ, ಅದನ್ನು ಹಾಗೆಯೇ ತಡೆಹಿಡಿದಿದ್ದೇವೆ.

ಶ್ರೀ ಆರ್. ನಾರಾಯಣ್ : ಚೇಂಜ್ ಮಾಡುವುದು ಬೇಡ, ಆ ಭೂಮಿ ಉಪಯೋಗ ಮಾಡುವುದು ಬೇಡವೆಂದು ಪರ್ಮಿಷನ್ ವಿತ್‌ಹೆಲ್ಡ್ ಮಾಡಿದ್ದೀರಿ. ಮತ್ತೆ ಕನ್‌ಸಿಡರೇಷನ್‌ನಲ್ಲಿದೆ ಎಂದು ಹೇಳುತ್ತೀರಿ. ಅದು ಬಡವರಿಗೆ, ಹರಿಜನ ಗಿರಿಜನರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಅನುಕೂಲವಾದ ಜಾಗ. ಮತ್ತೆ ಸರ್ಕಾರದವರೇ ಆ ಕೆರೆಯನ್ನು ಬ್ರೀಚ್ ಮಾಡಬೇಕೆಂದು ಹೇಳುತ್ತಾರೆ ಮತ್ತು ಆ ಟ್ಯಾಂಕ್ ಏರಿಯಾವನ್ನು ಗ್ರಾಂಟ್ ಮಾಡಿರುತ್ತಾರೆ. ಈ ಎಲ್ಲಾ ಹಿನ್ನೆಲೆಯಲ್ಲಿ, ದಯಮಾಡಿ, ತಾವು ಚೇಂಜ್ ಆಫ್ ಲ್ಯಾಂಡ್ ಯೂಸ್‌ಗೆ ಪರ್ಮಿಷನ್ ಕೊಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ವಿಚಾರ ಮಾಡುತ್ತೇನೆ.

ನಂಜನಗೂಡು ಗ್ರಾಮೀಣ ಕುಡಿಯುವ ನೀರಿನ ಯೋಜನೆ

503 - ಶ್ರೀ ಎಂ. ಮಹದೇವು (ನಂಜನಗೂಡು) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನಂಜನಗೂಡು ಗ್ರಾಮಾಂತರ ಕುಡಿಯುವ ನೀರು ಯೋಜನೆಯಡಿಯಲ್ಲಿ ಬರುವ ಮಾದನ ಹಳ್ಳಿಗುಡ್ಡಮಲ್ಲೂರು ಗುಡ್ಡ ಹಾಗೂ ಕಡಜಟ್ಟಿಗುಡ್ಡ ಗಳಿಗೆ ಸರ್ಕಾರ ಕಾಮಗಾರಿಗಳನ್ನು ತೆಗೆದುಕೊಳ್ಳದೇ ಇರುವುದಕ್ಕೆ ಕಾರಣವೇನು?*

ಆ) *ಈ ವಿಷಯದಲ್ಲಿ ಮುಖ್ಯಮಂತ್ರಿಯವರು ವಿಧಾನಸಭೆಯಲ್ಲಿ ಮಂಜೂರಾತಿ ಬಗ್ಗೆ ಆಶ್ವಾಸನೆ ನೀಡಿರುವುದು ನಿಜವೇ?*

ಇ) *ಹಾಗಿದ್ದಲ್ಲಿ ಈ ಕಾಮಗಾರಿಯನ್ನು ಯಾವಾಗ ತೆಗೆದುಕೊಳ್ಳಲಾಗುವುದು. ಹಾಗೂ ಈ ಯೋಜನೆಗೆ ಕಾಲಾವಧಿಯನ್ನು ನಿಗದಿಗೊಳಿಸಲಾಗಿದೆಯೇ?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ : 159 : ಗ್ರಾನೀಸ್ (1)90 ಬೆಂಗಳೂರು ದಿ : 10-1-91 ರಲ್ಲಿ ಈ ಮೂರು ಪ್ರಾಂತೀಯ ನೀರು